


# ಲೀಫ್ ಆರ್ಟ್
# ಅರಳಿ ಎಲೆ ಕಲಾವಿದ ಜಗದೀಶ

■ ದಿಲ್




ಚಿತ್ರಗಳು: ದಿಲ್

ನವಿರಾದ ಹಸಿರೆಲೆಗಳು ಮತ್ತು ಚಳಿಗಾಲ ಮುಗಿದು ಬೇಸಿಗೆ ಕಾಲಿಡುವ ಹೊತ್ತಲ್ಲಿ ನೆಲಕ್ಕೊರಗುವ ಮಾಗಿದ ಎಲೆಗಳನ್ನು ಬಳಸಿ ಕಲಾಕೃತಿಗಳನ್ನಾಗಿಸುವುದು ಅನನ್ಯ ಹವ್ಯಾಸ. ಇದೊಂದು ಅದ್ಭುತ ಕಲೆಯೂ ಹೌದು.

ಗ್ಲಿಸರಿನ್ ಮತ್ತು ನೀರು ಮಿಶ್ರಣದಲ್ಲಿ ಒಂದಷ್ಟು ದಿನ ನೆನೆಸಿಟ್ಟು ತೆಗೆದ ಎಲೆಗಳ ಮೇಲೆ ವಿವಿಧ ಮೆಟಾಲಿಕ್ ಬಣ್ಣಗಳ ಬಳಸಿ ಕಾಗದ ಅಥವಾ ಕ್ಯಾನ್ವಾಸಿನ ಮೇಲೆ ಪ್ರಿಂಟ್ ಹಾಕಿ ಅದಕ್ಕೊಂದು ಫ್ರೇಮ್ ಹಾಕಿಬಿಟ್ಟರೆ ಅದೇ ಒಂದು ಕಲಾಕೃತಿ. ಕಾಗದ ಮತ್ತು ಬಟ್ಟೆಗಳ ಮೇಲೆ ಈ ಪ್ರಿಂಟ್ ತುಂಬ ಸೊಗಸಾಗಿ ಮೂಡಿಬರುತ್ತದೆ. ಇಂಥ ಅಚ್ಚಿನ ಟೀ ಶರ್ಟ್ ಮತ್ತು ಟಾಪ್‌ಗಳನ್ನು ಧರಿಸುವವರು ಕಮ್ಮಿ ಏನಿಲ್ಲ.

ಕ್ಯಾನ್ವಾಸ್ ಪ್ರಿಂಟ್, ಫ್ರೇಮ್ಡ್ ಪ್ರಿಂಟ್, ಅಕ್ರೆಲಿಕ್ ಪ್ರಿಂಟ್, ಮೆಟಲ್ ಪ್ರಿಂಟ್ , ಗ್ರೀಟಿಂಗ್ ಕಾರ್ಡ್... ಹೀಗೆ ಎಲೆಗಳನ್ನು ಬಳಸಿ ಮಾಡುವ ಕಲಾಕೃತಿಗಳಿಗೆ ಯುರೋಪ್‌ನಲ್ಲಿ ತುಂಬ ಬೇಡಿಕೆ ಇದೆ. ಆದರೆ ಏಷ್ಯ ಭಾಗದಲ್ಲಿ ಅರಳಿ ಮರದ ಎಲೆಗಳಿಂದ ಮಾಡಿದ ಕಲಾಕೃತಿಗಳಿಗೆ ಹೆಚ್ಚು ಬೇಡಿಕೆ ಇದೆ. ಬುದ್ಧ ಪ್ರೇಮಿಗಳಂತೂ ಬೋಧಿ ಎಲೆಯ ಕಲಾಕೃತಿಗಳನ್ನು ತುಂಬ ಗೌರವದಿಂದ ಕೊಳ್ಳುತ್ತಾರೆ.

ಇಲ್ಲೊಬ್ಬರು (ಜಗದೀಶ್ ಸಿ) ಅರಳಿ ಎಲೆ ಬಳಸಿಕೊಂಡು ವಿವಿಧ ವಿನ್ಯಾಸಗಳನ್ನು ರೂಪಿಸುತ್ತಾರೆ. ವಿವಿಧ ನಮೂನೆಯ ಕಲಾವಿನ್ಯಾಸಗಳನ್ನು ಅರಳಿಸಿ, ವಿಶೇಷವಾಗಿ ಮನೆಯ ಒಳಾಂಗಣಕ್ಕೆ ಒಪ್ಪುವಂಥ ತೂಗುದೀಪ, ಟೇಬಲ್ ಲ್ಯಾಂಪ್ ಮತ್ತಿತರ ಅಲಂಕಾರಿಕ ವಸ್ತುಗಳನ್ನು ಮಾಡುತ್ತಾರೆ.

ಮನೆಯ ಒಳಾಂಗಣ (8ನೇ ಪುಟ ನೋಡಿ)

(6ನೇ ಪುಟದಿಂದ)